ಹುಬ್ಬಳ್ಳಿ–ಧಾರವಾಡ ಸ್ಮಾರ್ಟ ಸಿಟಿ ಲಿಮಿಟೆಡ್
HUBBALLI-DHARWAD SMART CITY LIMITED
सत्यमेव जयते
स्वच्छ भारत
एक कदम स्वच्छता की ओर
Special Purpose Vehicle for Implimentation of Smart City Project
(Registered Company No. CIN : U74999KA2017 PLC101265)

ಸಂಖ್ಯೆ/ಎಚ್‌ಡಿಎಸ್‌ಸಿಎಲ್/ಪತ್ರಿಕಾ ಮಾಹಿತಿ/2017-18

ದಿನಾಂಕ : 17-11-2017

## ಪತ್ರಿಕಾ ಮಾಹಿತಿ

ವಿಷಯ : ಹುಬ್ಬಳ್ಳಿ–ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **17-11-2017** ಶುಕ್ರವಾರ ರಂದು ಸುಪರ್ ಮಾರ್ಕೆಟ್, ಧಾರವಾಡದಲ್ಲಿ ವ್ಯಾಪಾರಸ್ಥರೊಂದಿಗೆ ಸುಪರ್ ಮಾರ್ಕೆಟ್ ಅಭಿವೃದ್ದಿಯ ಕುರಿತು ಚರ್ಚೆ ಹಾಗೂ ಸಮಾಲೋಚನೆ ನಡೆಸಿದ ಕುರಿತು ವರದಿ.

* * * * *

ಹುಬ್ಬಳ್ಳಿ–ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **17-11-2017** ಶುಕ್ರವಾರ ರಂದು ಸುಪರ್ ಮಾರ್ಕೆಟ್, ಧಾರವಾಡದಲ್ಲಿ ವ್ಯಾಪಾರಸ್ಥರೊಂದಿಗೆ ಹಾಗೂ ಅಂಗಡಿಕಾರರೊಂದಿಗೆ ಸುಪರ್ ಮಾರುಕಟ್ಟೆ ಅಭಿವೃದ್ದಿಯಲ್ಲಿ ವಿವರವಾದ ಯೋಜನೆ, ನೀಲಿನಕ್ಷೆ ಮತ್ತು ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಮಾಡಿದ ಕುರಿತು ಮಾಹಿತಿಯನ್ನು ಪ್ರದರ್ಶನ ಮಾಡಿ ಅವರೊಂದಿಗೆ ವಿವರವಾಗಿ ಚರ್ಚಿಸಲಾಯಿತು. ಸದರಿ ಸಮಾಲೋಚನೆ ಸಭೆಯಲ್ಲಿ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀ ಡಿ. ಕೆ. ಚವ್ಹಾಣ, ಆಯುಕ್ತರಾದ ಮೇಜರ್. ಸಿದ್ದಲಿಂಗಯ್ಯಾ ಹಿರೇಮಠ, ವಿರೋಧ ಪಕ್ಷದ ನಾಯಕರಾದ ಶ್ರೀ ಸುಭಾಶ ಯಲ್ಲಪ್ಪ ಶಿಂದೆ, ಪಾಲಿಕೆ ಸದಸ್ಯರಾದ ಶ್ರೀ ಸಂಜಯ ಕಪಟಕರ, ಶ್ರೀ ಶೇಳಕೆ ಮಾಜಿ ನಗರಾಭಿವೃದ್ಧಿ ಪ್ರಾಧಿಕಾದ ಅಧ್ಯಕ್ಷರಾದ ಶ್ರೀ ದತ್ತಾ ಡೋರ್ಲೆ, ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಶ್ರೀ ಸತೀಶ ತುರುಮರಿ, ವ್ಯಾಪಾರಸ್ಥರಾದ ಶ್ರೀ ಟೇನವಾಲೆ, ಶ್ರೀ ರವೀಂದ್ರ ಆಕಳವಾಡಿ, ಶ್ರೀ ಉದಯ ಅಂಡಿಗೇರಿ, ಮಾಜಿ ಪಾಲಿಕೆ ಸದಸ್ಯರಾದ ಶ್ರೀ ಪ್ರಕಾಶ ಘೋಡಬೋಲೆ, ಶ್ರೀ ಹೇಮರಾಜ ಭಂಡಾರಿ, ಶ್ರೀ ಬಸವರಾಜ ಜಾಧವ, ಶ್ರೀ ಮಹಮ್ಮದಅಲಿ ಗೂಡುಬಾಯಿ ಮತ್ತು ಇತರ ವ್ಯಾಪಾರಸ್ಥರು ಭಾಗವಹಿಸಿದ್ದರು.

ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯಿಂದ ಉದ್ದೇಶಿತ ಸುಪರ್ ಮಾರುಕಟ್ಟೆ ಅಭಿವೃದ್ದಿಯ ಕುರಿತು ಸಂಪೂರ್ಣ ನೀಲಿನಕ್ಷೆ ಹಾಗೂ ಚಿತ್ರಣದೊಂದಿಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಲಾಯಿತು. ಪ್ರಸ್ತುತ ಮಾರುಕಟ್ಟೆಯ ವಿಸ್ತೀರ್ಣ 3 ಲಕ್ಷ ಚ.ಪೂ ಇದ್ದು ಅದರಲ್ಲಿ ಕೆಳಮಹಡಿಯಲ್ಲಿ 252 ಲಘುವಾಹನಗಳನ್ನು 228 ದ್ವಿಚಕ್ರ ವಾಹನಗಳು ಹಾಗೂ 25 ಬಾರಿ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಿ ನೆಲಮಹಡಿ ಹಾಗೂ ಮೊದಲನೆ ಮಹಡಿಯಲ್ಲಿ 826 ವ್ಯಾಪಾರ ಕಟ್ಟೆಗಳು, 124 ಸ್ಟಾಲ್‌ಗಳು ಎ.ಬಿ.ಸಿ.ಡಿ. ಮತ್ತು ಇ ಮಾದರಿ ತಯಾರಿಸಲಾಗಿದೆ. ಉದ್ದೇಶಿತ ಮಾರುಕಟ್ಟೆಯಲ್ಲಿ ಉತ್ತಮ ಒಳಚರಂಡಿ ವ್ಯವಸ್ಥೆ, ನಾಗರೀಕ ಆಧುನಿಕ ಗ್ರಾಹಕರ ವ್ಯಾಪಾರದ ವ್ಯವಸ್ಥೆ, ಆಧುನಿಕ ವಾಹನದ ನಿಲುಗಡೆ, ಶೌಚಾಲಯ ವ್ಯವಸ್ಥೆ, ಮಳೆನೀರು ಕೊಯ್ಲು, ಉಪಹಾರ ಮಂದಿರ ಹಾಗೂ ಇತರ ಅವಶ್ಯಕ ವ್ಯವಸ್ಥೆಗಳನ್ನು ಒಳಗೊಂಡಿರುತ್ತವೆ.

ಪ್ರಸ್ತುತ ಯೋಜನೆಯ ಅನುಷ್ಠಾನದ ಸಮಯದಲ್ಲಿ ವ್ಯಾಪಾಸ್ಥರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಪರ್ಯಾಯ ವ್ಯವಸ್ಥೆಯ ನಕ್ಷೆಯನ್ನು ಪ್ರದರ್ಶಿಸಿ ಒಟ್ಟು 45 ಕೋಟಿ ವೆಚ್ಚದಲ್ಲಿ ಸಾರ್ವಜನಿಕ, ಖಾಸಗಿ ಸಹಭಾಗಿತ್ವ ಅಡಿಯಲ್ಲಿ ಯೋಜನೆಯನ್ನು ಸರ್ಕಾರದ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದರ ಪೂರ್ವಭಾವಿಯಾಗಿ ಯೋಜನೆಯ ನಿಯಮಾವಳಿಯಂತೆ ಸಾಧ್ಯತಾ ವರದಿಯನ್ನು (ಪ್ರೊಜೆಕ್ಟ್ ಡಿಪಿಆರ್) ತಯಾರಿಸುವ ಮತ್ತು ಅಂತಿಮಗೊಳಿಸುವ ಸಮಯದಲ್ಲಿ ವ್ಯಾಪಾರಸ್ಥರೊಂದಿಗೆ ಮುಕ್ತವಾಗಿ ಚರ್ಚಿಸಿ ಅಹವಾಲುಗಳನ್ನು ಆಲಿಸಿ ಸಾಧ್ಯವಾದ ಎಲ್ಲ ಅನುಕೂಲಗಳನ್ನು ಯೋಜನಾ ವರದಿಯಲ್ಲಿ ಅಳವಡಿಸಿ ವ್ಯವಸ್ಥಿತವಾಗಿ ಯೋಜನೆಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಷ್ಠಾನಗೊಳಿಸುವುದಾಗಿದೆ.

**ಮುಕ್ತವಾಗಿ ವ್ಯಾಪಾಸ್ಥರೊಂದಿಗೆ ಚರ್ಚೆಯಲ್ಲಿ ಈ ಕೆಳಗಿನಂತೆ ಸಲಹೆಗಳನ್ನು ಮತ್ತು ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು.**

1. ಸ್ಮಾರ್ಟಸಿಟಿ ಯೋಜನೆಯಲ್ಲಿ ತೆಗೆದುಕೊಳ್ಳುವ ಸುಪರ್ ಮಾರುಕಟ್ಟೆ ಯೋಜನೆ ಮಂಜೂರಾತಿ ಪೂರ್ವದಲ್ಲಿ ಎಲ್ಲ ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಅವರ ನಂಬುಗೆಯನ್ನು ಪಡೆದುಕೊಂಡು ಯೋಜನೆಯನ್ನು ಅಂತಿಮಗೊಳಿಸಬೇಕು.
2. ಮಂಜೂರಾದ ಯೋಜನೆಯನ್ನು ಹಂತ–ಹಂತವಾಗಿ ಅನುಷ್ಠಾನಗೊಳಿಸಿ ಪ್ರತಿ ಹಂತದಲ್ಲಿ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಮತ್ತು ಯೋಜನೆಯ ಪೂರ್ಣಗೊಂಡ ನಂತರ ಮೊದಲು ಇದ್ದ ಸ್ಥಳದಲ್ಲಿಯೇ ಅವರಿಗೆ ಸ್ಥಳವನ್ನು ಹಂಚಿಕೆಯಾಗಬೇಕು. ಈ ಕುರಿತು ಮಹಾನಗರ ಪಾಲಿಕೆ ಸ್ಪಷ್ಟ ಅಧೀಕೃತ ಪತ್ರವನ್ನು ನೀಡಬೇಕು.
3. ಯಾವುದೇ ವ್ಯಾಪಾರಸ್ಥರಿಗೆ ಅನ್ಯಾಯ ಆಗದಂತೆ ಮತ್ತು ಉಳಿದ ವ್ಯಾಪಾರಸ್ಥರಿಗೆ ಸದರಿ ಸುಪರ್ ಮಾರುಕಟ್ಟೆ ಜಾಗೆಯಲ್ಲಿ ಸ್ಥಳಾವಕಾಶದ ವ್ಯವಸ್ಥೆ ಮಾಡಬೇಕು. ಈ ಪ್ರದೇಶದಲ್ಲಿ ಯೋಜನೆಯ ಅನುಷ್ಠಾನದ ಅವಧಿಯಲ್ಲಿ ಪರ್ಯಾಯ ವ್ಯವಸ್ಥೆಯನ್ನು ಈಗ ಇದ್ದ ಸ್ಥಳದ ಸಮೀಪದಲ್ಲಿಯೇ ಸ್ಥಳವನ್ನು ಗುರುತಿಸಿ ಅವರಿಗೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಬೇಕು.
4. ಯೋಜನೆಯ ಪೂರ್ಣಗೊಂಡ ನಂತರ ಅಧಿಕ ಭಾಡಿಗೆ ಸಂಗ್ರಹ ಆಗಲಿ ಅಥವಾ ಅಧಿಕ ಮೊತ್ತದ ಲೀಜ್ ಆಕರಿಸುವುದಾಗಲಿ ಆಗಬಾರದು. ಬಾಡಿಗೆ ಹಾಗೂ ಮಾರಾಟದ ದರ ನಿಗದಿಪಡಿಸುವಾಗ ವ್ಯಾಪಾರಸ್ಥರ ಸಂಘದೊಂದಿಗೆ ಮುಕ್ತವಾಗಿ ಚರ್ಚಿಸಿ ದರ ನಿಗದಿಪಡಿಸಬೇಕು. ಯಾವುದೇ ಕಾರಣಕ್ಕೂ ಹೆಚ್ಚಿನ ದರ, ಅಧಿಕ ಆರ್ಥಿಕ ಬಾರ ಹೊರೆಯಾಗದಂತೆ ಗಮನಿಸಬೇಕು.

5. ಈ ಯೋಜನೆಯ ಡಿಪಿಆರ್ ಅಂತಿಮಗೊಳಿಸುವ ಪೂರ್ವದಲ್ಲಿ ಗೌರವಾನ್ವಿತ ಸಚಿವರ, ಶಾಸಕರು, ವಾರ್ಡ ಸದಸ್ಯರು ಹಾಗೂ ಪರಿಣಿತ ತಜ್ಞರೊಂದಿಗೆ ಸಮಾಲೋಚನೆ ಸಭೆಗಳನ್ನು ಆಯೋಜನೆ ಮಾಡಿ ಚರ್ಚಿಸಬೇಕು. ಯೋಜನೆಯ ಬಗ್ಗೆ ಸ್ಪಷ್ಟ ಚಿತ್ರಣ ಒದಗಿಸಬೇಕು.
6. ಈ ಯೋಜನೆ ಅನುಷ್ಠಾನದಲ್ಲಿ ವ್ಯಾಪಾರಸ್ಥರನ್ನೊಳಗೊಂಡ ಒಂದು ಪ್ರತ್ಯೇಕ ಸಮಿತಿಯನ್ನು ರಚನೆ ಮಾಡಿ ನಿಗದಿಪಡಿಸಿದ ಸಮಯದಲ್ಲಿ ಮಾರುಕಟ್ಟೆಯನ್ನು ಅಭಿವೃದ್ದಿಪಡಿಸಿ ಹಂಚಿಕೆ ಅಗುವಂತೆ ನೋಡಿಕೊಳ್ಳಬೇಕು.
7. ಸುಪರ್ ಮಾರುಕಟ್ಟೆಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿ ಹಂತ-ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಬೇಕು. ಪ್ರತಿ ಹಂತದ ಕಟ್ಟಡ ಪೂರ್ಣಗೊಂಡ ನಂತರ ಕೂಡಲೇ ವ್ಯಾಪಾರಸ್ಥರಿಗೆ ಹಂಚಿಕೆಯಾಗಬೇಕು.
8. ಪ್ರತಿಯೊಂದು ಹಂತದಲ್ಲಿ ಆದ ಅಭಿವೃದ್ದಿಯ ಕುರಿತು ಮಾಹಿತಿಯನ್ನು ನೀಡುವ ವ್ಯವಸ್ಥೆ ಆಗಬೇಕು. ಬಡವ್ಯಾಪಾರಸ್ಥರ ಹಿತಾಸಕ್ತಿ ಹಾಗೂ ಪ್ರಸ್ತುತ ವ್ಯಾಪಾರ ಮಾಡುವ ಎಲ್ಲ ವ್ಯಾಪಾರಸ್ಥರಿಗೆ ಯಾವುದೇ ತರಹದ ಜಾತಿ ವರ್ಗೀಕರಣ ಮಾಡದೇ ಕಾಯ್ದಿರಿಸದೇ ಎಲ್ಲ ವ್ಯಾಪಾಸ್ಥರಿಗೆ ಪ್ರಸ್ತುತ ಇರುವ ಜಾಗೆಯಲ್ಲಿಯೇ ಅವರಿಗೆ ವ್ಯಾಪಾರದ ಕಟ್ಟೆ ಮತ್ತು ಕಟ್ಟಡ ಹಂಚಿಕೆಯಾಗಬೇಕು. ಈ ವಿಷಯದಲ್ಲಿ ವ್ಯಾಪಾರಸ್ಥರ ಸಂಘದ ಮೂಲಕ ದೃಢೀಕರಣ ಮಾಡಬೇಕು.

ಈ ಮೇಲಿನಂತೆ ಸದರಿ ಸಭೆಯಲ್ಲಿ ಅಭಿಪ್ರಾಯಗಳು ಹಾಗೂ ಸಲಹೆಗಳನ್ನು ಪಡೆಯಲಾಯಿತು. ಆಯುಕ್ತರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ಮಾರ್ಟಸಿಟಿ ಯೋಜನೆಯ ಪರಿಕಲ್ಪನೆ ಮತ್ತು ವ್ಯಾಪಾರಸ್ಥರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅವರ ನಂಬುಗೆಯನ್ನು ಪಡೆದುಕೊಂಡು ಯೋಜನೆಯನ್ನು ಮುಕ್ತ ಚರ್ಚಾ ಸಭೆಗಳನ್ನು ಆಯೋಜಿಸಿ ಸಂಪೂರ್ಣ ಮಾಹಿತಿ ನೀಡಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು. ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಇವರು ಮಾತನಾಡಿ ಇಂದಿನ ಸಭೆಯಲ್ಲಿ ದಾಖಲಾದ ಎಲ್ಲ ವಿಷಯಗಳನ್ನು ದಾಖಲಿಸಿದ್ದು ಪ್ರಸ್ತುತ ತಯಾರಿಸಿರುವ ಸಾದ್ಯತಾ ವರದಿಯಲ್ಲಿ ಅವುಗಳನ್ನು ಅಳವಡಿಸುವುದು ಹಾಗೂ ಇನ್ನೂ ಮುಕ್ತ ಚರ್ಚೆ ಸಭೆಗಳನ್ನು ಆಯೋಜಿಸುವುದಾಗಿ ಸಭೆಗೆ ತಿಳಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ ಪೂಜ್ಯ ಮಹಾಪೌರರಾದ ಶ್ರೀ ಡಿ. ಕೆ. ಚವ್ಹಾಣ ಇವರು ಮಾತನಾಡಿ ಸ್ಮಾರ್ಟಸಿಟಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ವ್ಯಾಪಾರಸ್ಥರ ಹಿತಾಸಕ್ತಿ ಮತ್ತು ಅವರ ಆರ್ಥಿಕ ಬಲವರ್ಧನೆಗೆ ಎಲ್ಲ ಕ್ರಮ ಪಾಲಿಕೆಯಿಂದ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಶ್ರೀ ಸತೀಶ ತುರಮುರಿ ಇವರು ಮಾತನಾಡಿ ಸುಪರ್ ಮಾರುಕಟ್ಟೆ ಅನುಷ್ಠಾನಗೊಳಿಸುವ ಯೋಜನೆಯ ಸಂಪೂರ್ಣ ಮಾಹಿತಿಯನ್ನು ವ್ಯಾಪಾರಸ್ಥರಿಗೆ ಹಂಚಿಕೆಯಾಗಬೇಕು. ಇನ್ನೂ ಹೆಚ್ಚಿನ ಸಭೆಗಳನ್ನು ಮಾನ್ಯ ಸಚಿವರು, ಶಾಸಕರು, ವಾರ್ಡ ಸದಸ್ಯರು ಒಳಗೊಂಡಂತೆ ಆಯೋಜಿಸಿ ಮುಕ್ತ ಚರ್ಚೆ ಹಾಗೂ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಬೇಕು. ಪಾಲಿಕೆಯ ವಿರೋದ ಪಕ್ಷದ ನಾಯಕರಾದ ಶ್ರೀ ಸುಭಾಶ ಯಲ್ಲಪ್ಪ ಶಿಂದೆ ಮಾತನಾಡಿ ಸುಪರ್ ಮಾರುಕಟ್ಟೆ ಧಾರವಾಡ ಇತಿಹಾಸದ ಹಳೆಯ ಮಾರುಕಟ್ಟೆಯಾಗಿದ್ದು ಅಭಿವೃದ್ದಿಯ ಅವಶ್ಯಕತೆ ಇರುವುದು ಆದರೆ ಅಭಿವೃದ್ದಿಯ ಸಮಯದಲ್ಲಿ ವ್ಯಾಪಾಸ್ಥರಿಗೆ ಅನ್ಯಾಯ ಆಗದಂತೆ ಎಚ್ಚರ ವಹಿಸಿ ಎಲ್ಲರಿಗೂ ಕನಿಷ್ಟ ದರದಲ್ಲಿ ಅಂಗಡಿಗಳನ್ನು ಸಿಗುವಂತೆ ಉತ್ತಮ ಸೌಲಭ್ಯ ಕಲ್ಪಿಸಬೇಕೆಂದು ತಿಳಿಸಿದರು. ವಾರ್ಡ ಸದಸ್ಯರಾದ ಶ್ರೀ ಸಂಜಯ ಕಪಟಕರ ಇವರು ಮಾತನಾಡಿ ಸ್ಮಾರ್ಟಸಿಟಿ ಯೋಜನೆಯು ಒಂದು ಉತ್ತಮ ನಗರಾಭಿವೃದ್ದಿ ಯೋಜನೆಯಾಗಿದ್ದು ವ್ಯಾಪಾರಸ್ಥರಿಗೆ ಆಧುನಿಕ ವ್ಯಾಪಾರದ ಸೌಲಭ್ಯಗಳನ್ನು ಕಲ್ಪಿಸಿ ಅವರ ವ್ಯಾಪಾರವನ್ನು ಹೆಚ್ಚಿಸಿ ಅವರ ಆರ್ಥಿಕ ಅಭಿವೃದ್ದಿಯನ್ನು ಹೆಚ್ಚಿಗೆ ಆಗುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

**ಈ ವರದಿಯೊಂದಿಗೆ ಸಮಾಲೋಚನಾ ಸಭೆಯ ಫೋಟೋಗಳನ್ನು ಲಗತ್ತಿಸಿ ಕಳಿಸಲಾಗಿದೆ.**

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿ
ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :** sohdsmartcity@gmail.com

**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ ಕಾಲೇಜ ಆವರಣ ವಿದ್ಯಾನಗರ, ಹುಬ್ಬಳ್ಳಿ